**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,**
**ನ್ಯಾಯಾಲಯ,ಹೊಸದುರ್ಗ.**

ಅಸಲು ದಾವಾ ಸಂಖ್ಯೆ **59-2017** ದಿನಾಂಕಃ **16 -06-2026**

ಡಿ.ಡಬ್ಲ್ಯೂಃ **4**

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ವಾದಿಯ ಪರ ಶ್ರೀಮತಿ ಎಲ್ ಎಂ ಎಚ್ ವಕೀಲರಿಂದ

1. ನನ್ನ ತಂದೆ ತಾಯಿಗೆ ನಾವು 4 ಜನ ಮಕ್ಕಳು. ಅವರು ಭಾರತಿ, ಲಕ್ಷ್ಮೀ, ನಾನು ಮತ್ತು ಜಗದೀಶ. ಸದರಿ ಜಗದೀಶ ಮರಣ ಹೊಂದಿರುತ್ತಾರೆ. ವಾದಿ ನನ್ನ ಅಕ್ಕನಾಗಿದ್ದು ಈ ದಾವೆಯನ್ನು ಭಾಗ ಬೇಕು ಎಂದು ಕೇಳಿರುತ್ತಾರೆ. ದಾವೆಯನ್ನು ಜಮೀನು ಮತ್ತು ಮನೆಯ ಆಸ್ತಿಗಳ ಬಾಬ್ತು ದಾಖಲಿಸಿರುತ್ತಾರೆ. ದಾವಾ 1 ನೇ ಸ್ವತ್ತು ತೆಂಗಿನತೋಟ. ಸದರಿ ಆಸ್ತಿ ನಮ್ಮ ಮನೆತನಕ್ಕೆ ಸೇರಿದ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಅದು ತನ್ನ ಅಜ್ಜಿ ಕರಿಯಮ್ಮನಿಗೆ ಸೇರಿದ ಸ್ವತ್ತು ಎಂದು ಸ್ವತಃ ನುಡಿಯುತ್ತಾರೆ. ಸದರಿ ಕರಿಯಮ್ಮ ನನ್ನ ತಂದೆಯ ತಾಯಿ. ಆದ ಕಾರಣ ಅದು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ.

2. ಸದರಿ ದಾವಾ 1 ನೇ ಸ್ವತ್ತನ್ನು ನನ್ನ ಅಜ್ಜಿ ಮೊದಲು ನನ್ನ ತಂದೆ ತಾಯಿ ಜೊತೆ ಅನುಭವಿಸುತ್ತಿದ್ದರು ಎಂದರೆ ಸಾಕ್ಷಿ ನನ್ನ ಅಜ್ಜಿ ಮರಣಾ ನಂತರ ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಮರಣಾ ನಂತರ ಸದರಿ ಸ್ವತ್ತನ್ನು ನಾನು ಮತ್ತು 1 ನೇಪ್ರತಿವಾದಿ ಅನುಭವಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ಒಟ್ಟಿಗೆ ಅನುಭಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ ತಾಲ್ಲೂಕು ಕಚೇರಿಯಲ್ಲಿ ನನ್ನ ಹೆಸರಿಗೆ ಮುಟೇಷನ್ ಮಾಡಿಸಿರುತ್ತಾರೆ. ಮುಟೇಷನ್ ಮೊದಲು ದಾನಪತ್ರ ಬರೆದುಕೊಟ್ಟಿದ್ದರು. ಸದರಿ ದಾನಪತ್ರವನ್ನು ನನ್ನ ಅಜ್ಜಿ 1987-88 ನೇ ಇಸ್ವಿಯಲ್ಲಿ ಮಾಡಿರುತ್ತಾರೆ. ಆಗ ನನಗೆ ಸುಮಾರು 5-6 ವರ್ಷ ವಯಸ್ಸು. ಸದರಿ ದಾನಪತ್ರವನ್ನು ನಾನು ಈ ದಾವೆಯಲ್ಲಿ ಹಾಜರು ಮಾಡಿರುತ್ತೇನೆ. ನಾನು ಯಾವುದೇ ದಾನಪತ್ರವನ್ನು

ಹಾಜರುಮಾಡದಿದ್ದರೂ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಅಜ್ಜಿ ಯಾವುದೇ ದಾನಪತ್ರ ನನಗೆ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿ ಮುಟೇಷನ್ ವರ್ಗಾವಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜಿ ಯಾವುದೇ ನೋಂದಾಯಿತ ದಾಖಲೆ ಗಳ ಮೂಲಕ ವರ್ಗಾವಣೆ ಮಾಡದ ಕಾರಣ ದಾವಾ ಸ್ವತ್ತು ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ .

3. ನನ್ನ ತಂದೆ ಪಿ.ಡಿ.ಓ ಕಚೇರಿಯಲ್ಲಿ ಸೇವಕನಾಗಿ ಕರ್ತವ್ಯ ನಿರ್ವಹಿವುಸುತ್ತಿದ್ದರು. ದಾವಾ 2 ನೇ ನಿವೇಶನದ ಸ್ವತ್ತನ್ನು ನನ್ನ ತಂದೆ ದಿ.12.08.1994 ರಂದು ನನ್ನ ತಾಯಿ ಹೆಸರಿನಲ್ಲಿ ಖರೀದಿಸಿದ್ದರು ಎಂದರೆ ಸರಿಯಲ್ಲ. ನಂತರ ಸದರಿ ಸ್ವತ್ತಿನಲ್ಲಿನನ್ನ ತಂದೆ ಮನೆ ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ನಾನು, ವಾದಿ ಮತ್ತು 1 ನೇ ಪ್ರತಿವಾದಿ ನಮ್ಮ ತಂದೆ ತಾಯಿಯ ಜೊತೆ ಒಟ್ಟಿಗೆ ವಾಸವಿದ್ದೇವೆ ಎಂದರೆ ಸರಿ. ನನ್ನ ತಂದೆ ತಾಯಿಯ ಮರಣಾ ನಂತರ ಇಂದಿಗೂ ನಾನು , ವಾದಿ ಮತ್ತು 1 ನೇ ಪ್ರತಿವಾದಿ ಒಟ್ಟಿಗೆ ಅನುಭವದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿಯ ಮರಣಾ ನಂತರ ದಾವಾ 2 ನೇ ಸ್ವತ್ತಿನ ಖಾತೆ ನನ್ನ, ವಾದಿ, 1 ನೇ ಪ್ರತಿವಾದಿಯ ಜಂಟಿ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ಸರಿ . ನನ್ನ ತಂದೆ ದಾವಾ 2 ನೇ ಸ್ವತ್ತನ್ನು ನನ್ನ ತಾಯಿಯ ಹೆಸರಿನಲ್ಲಿ ಖರೀದಿಸಿರುವ ವಿಚಾರ ತಿಳಿದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ 2 ನೇ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿದ್ದು ಅದರಲ್ಲಿ ವಾದಿಗೆ, ನನಗೆ ಮತ್ತು 1 ನೇ ಪ್ರತಿವಾದಿಗೆ ಸಮಾನವಾದ ಹಿಸ್ಸಾ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ದಾವಾ 2 ನೇ ಸ್ವತ್ತಿನ ಬಗ್ಗೆ ಯಾವುದೇ ವಿವರಣೆಯನ್ನು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಸಮಾನ ಹಿಸ್ಸೆ ಇದ್ದರೂ ಅದನ್ನು ತಪ್ಪಿಸುವ ಸಲುವಾಗಿ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಮುಖ್ಯ ವಿಚಾರಣೆ ಪ್ರಮಾಣಪತ್ರ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.